## ತೊಡೆ

ಮದುವೆ ಸಮಾರಂಭದ ಬಫೆ ಸಾಲಿನಲ್ಲಿ ಅಜ್ಜಿ ಹಾಗೂ ಮೂರು ವರ್ಷದ ಮೊಮ್ಮಗ ನಿಂತಿದ್ದರು. ಬಡಿಸುವ ಸಮಯದಲ್ಲಿ ಹುಡುಗ, 'ನಂಗೆ ತೊಡೆ ಸಾಕು' ಎಂದು ಜೋರಾಗಿ ಗಲಾಟೆ ಮಾಡುತ್ತಿದ್ದ. 'ಮೊದಲೇ ಕೊರೊನ ಚಿಂತೆ... ಈ ಸಮಾರಂಭದಲ್ಲಿ ಏನಪ್ಪಾ ತೊಡೆ ಮಾಂಸಾಹಾರ...' ಎಂದು ಜನ ತಬ್ಬಿಬ್ಬಾದರು. ಮೊಮ್ಮಗನ ಮಾತಿನಿಂದ ಬೇರೆಯವರು ಅಪಾರ್ಥ ಮಾಡಿಕೊಂಡಿದ್ದು ಅಜ್ಜಿಗೆ ಗೊತ್ತಾಯಿತು. ಕೂಡಲೇ, 'ಅಯ್ಯೊ, ನಮ್ಮದು ಕೊಂಕಣಿ ಮನೆ ಮಾತು. ಕೊಂಕಣಿಯಲ್ಲಿ 'ತೊಡೆ' ಎಂದರೆ 'ಸ್ವಲ್ಪ' ಅಂತ ಅರ್ಥ. ಅವನು 'ಸ್ವಲ್ಪವೇ ಸಾಕು' ಅಂತ ಹೇಳೋಕೆ ಕನ್ನಡದ ಜೊತೆಗೆ ಕೊಂಕಣಿ ಶಬ್ದ ಸೇರಿಸಿದ್ದಾನಷ್ಟೆ' ಎಂದು ಸಮಜಾಯಿಶಿ ನೀಡಿದರು. ಕನ್ನಡ ಕೊಂಕಣಿ ಮಿಶ್ರಣದಿಂದ ಆದ ಅಭಾಸಕ್ಕೆ ಅಲ್ಲಿದ್ದವರಿಗೆಲ್ಲ ನಗು ಬಂತು.



**ಜಯಮಾಲಾ ಪೈ**



ಕಲೆ: ಗಣೇಶ್ ಆಚಾರ್ಯ

## ಕಾಲರ್ ಟ್ಯೂನ್

ಅವತ್ತು ಹಸುವಿನ ಚಿಕಿತ್ಸೆಗಾಗಿ ಹಳ್ಳಿಗೆ ಹೋಗುತ್ತಿದ್ದೆ. ಪರಿಚಿತ ರೈತನೊಬ್ಬ ನನ್ನನ್ನು ನೋಡಿದವನೆ, 'ಸ್ವಾ, ಈಗ ಆರೋಗ್ಯ ಹೆಂಗಿದೆ?' ಎಂದು ಕೇಳುತ್ತಿದ್ದಂತೆ ನಂಗೆ ಆಶ್ಚರ್ಯ! 'ನಾನು ಆರಾಮಿದ್ದೀನಲ್ಲಾ ಮಾರಾಯ?' ಅಂದೆ. 'ಹೋದ್ವಾರ ನಮ್ ಕರುಗೆ ಹುಷಾರಿಲ್ಲ ಅಂತ ನಿಮ್ಗೆ ಫೋನು ಮಾಡ್ದೆ ಸ್ವಾ. ನೀವು ಒಂದೇ ಸಮ್ನೆ ಕೆಮ್ತಿದ್ರಿ. ಆಮೇಲೆ ಇಂಗ್ಲೀಸಲ್ಲಿ ಏನೇನೋ ಮಾತು. ನಂಗೆ ಅರ್ಥ ಆಗ್ಲಿಲ್ಲ. ನಿಮ್ಗೆ ಹುಷಾರಿಲ್ವೇನೊ ಅಂತ ಫೋನಿಟ್ಟೆ' ಆ ಮುಗ್ಧ ರೈತನ ಮಾತು ಕೇಳಿ ನಗು ಬಂತು. ಫೋನಲ್ಲಿ ಕೊರೊನಾ ಕಾಲರ್ ಟ್ಯೂನ್ ಕೇಳಿ ನನಗೆ ಆರೋಗ್ಯ ಸರಿಯಿಲ್ಲವೆಂದು ಭಾವಿಸಿದ್ದ!

**ಡಾ. ಮುರಳೀಧರ ಕಿರಣಕೆರೆ**